ಜೀವನಗಳು... ನೀನಾಳೊಂದಿಗೆ ಇವೆಲ್ಲವೂ ಆರಂಭವಾದವು. ದಿನನಿತ್ಯದ ಸಮಸ್ಯೆಗಳು ಭಯಾನಕವಾಗಿ ತೋರುತ್ತಿದ್ದವು. ಅವಳು ನನ್ನೊಂದಿಗೆ ರೇಗುತ್ತಿದ್ದಳು. ನಾನು ಮತ್ತು ನೀನಾ ಯಾವ ಕಾರಣಗಳಿಂದ ಸಮೀಪಕ್ಕೆ ಬಂದಿದ್ದೆವೋ, ಆ ಕಾರಣಗಳೇ ನೀನಾ ನನ್ನ ಮೇಲೆ ರೇಗಲು ಕಾರಣವಾಗಿದ್ದವು. ಎಂಥ ವಿಚಿತ್ರ ಸಂಗತಿಯಾಗಿತ್ತು!

'ಶಾಲಾ ಮಾಸ್ತರ್... ನಿಷ್ಪ್ರಯೋಜಕ' ಎಂದು ನೀನಾ ನನ್ನನ್ನು ಗೇಲಿ ಮಾಡುತ್ತಿದ್ದಳು. ತನ್ನ ಪತಿ ಓರ್ವ ಶಾಲಾ ಅಧ್ಯಾಪಕ ಎಂದು ತನ್ನ ಪರಿಚಿತರಲ್ಲಿ ಹೇಳಲು ಹಿಂಜರಿಯುತ್ತಿದ್ದಳು. ಇದನ್ನೆಲ್ಲಾ ಯೋಚಿಸಿ ಇಂದೂ ನನ್ನ ಮನಸ್ಸು ಕಹಿಯಾಗುತ್ತದೆ. ಅದೊಂದು ದಿನ ನಾನು ಮತ್ತು ನೀನಾ ಅವಳ ಪರಿಚಿತರೊಬ್ಬರ ಮನೆಗೆ ಹೋಗಿದ್ದೆವು. ನೀವೇನು ಮಾಡುತ್ತಿದ್ದೀರಿ ಎಂದು ಪರಿಚಿತರು ನನ್ನನ್ನು ಕೇಳಿದರು. ನಾನು ಉತ್ತರಿಸುವುದಕ್ಕೆ ಮೊದಲು ನೀನಾ ಅವರಿಗೆ, 'ಜಿಮನೇಜಿಯಮ್ ಲೆಕ್ಚರರ್' ಎಂದಳು.

ಇದು ನನಗೆ ಇಷ್ಟವಾಗಲಿಲ್ಲ. ನಾನೇನೋ ಅದನ್ನೇ ಹೇಳಲು ಬಯಸುತ್ತಿದ್ದೆ. ಹೀಗಾಗಿ ಹೇಳಿದೆ, 'ನಾನು ಜಿಮನೇಜಿಯಮ್‌ನವನಲ್ಲ, ನಾನು ಸೆಕೆಂಡರಿ ಸ್ಕೂಲಿನ ಟೀಚರ್'. ನೀನಾಳ ಮುಖ ಕಳೆಗುಂದಿತು. ನಾನು ಸತ್ಯವನ್ನು ಕಕ್ಕಿದೆ ಎಂಬ ಸಿಟ್ಟು ಅವಳ ಮುಖದಲ್ಲಿ ಅನೇಕ ದಿನಗಳವರೆಗಿತ್ತು. ಆದರೆ ನನ್ನ ಸಮಾಜದಲ್ಲಿ ಶಿಕ್ಷಕರಾಗುವುದು ಗೌರವದ ಸಂಕೇತವಾಗಿತ್ತು. ನನಗೆ ನನ್ನ ಅಧ್ಯಾಪನ ವೃತ್ತಿಯ ಬಗ್ಗೆ ತುಂಬಾ ಹೆಮ್ಮೆಯಿದೆ. ಹನ್ನೊಂದರಿಂದ ಹದಿನಾರರ ಯುವಕರೊಂದಿಗೆ ಸಾರ್ಥಕ ಸಮಯವನ್ನು ಕಳೆಯುವುದು ನನಗೆ ಪ್ರಿಯವೆನಿಸುತ್ತದೆ. ಶಕ್ತಿಯ ಗೂಡಾಗಿರುವ ತರುಣರ ಮೆದುಳಿನಲ್ಲಿ ಸದಾ ಏನಾದರೊಂದು ಅನ್ವೇಷಣೆ ನಡೆಯುತ್ತಿರುತ್ತದೆ, ಅವರಿಗೆ ಬೋಧಿಸುವುದು ಚಿಕ್ಕ ಕೆಲಸ ಹೇಗಾಗುತ್ತದೆ! ನೀನಾ ಯಾವ ಸಮಾಜದ ನೇತೃತ್ವವನ್ನು ವಹಿಸುತ್ತಿದ್ದಳೋ ತಿಳಿಯದು!

ನೀನಾ ನನ್ನ ವಯಸ್ಸನ್ನು ಸಹ ಅವರಿಂದ ಮರೆಮಾಚುತ್ತಿದ್ದಳು. ನಾನು ಅವಳಿಗೆ ಕೇಳಿದ್ದೆ, 'ನೀನೇಕೆ ನನ್ನ ವಯಸ್ಸನ್ನು ಐದಾರು ವರ್ಷ ಕಡಿಮೆ ಹೇಳ್ತೀಯ?'

'ಎಲ್ಲರಿಗೂ ಎಲ್ಲವನ್ನೂ ನಿಜ ಹೇಳುವ ಅಗತ್ಯವೇನಿದೆ?'

'ತಪ್ಪು ಹೇಳುವ ಅಗತ್ಯವೇನಿದೆ?' ನಾನು ತರ್ಕಿಸುತ್ತಿದ್ದೆ.

'ನನ್ನ ಮತ್ತು ನಿಮ್ಮ ವಯಸ್ಸಿನಲ್ಲಿ ತುಂಬಾ ಅಂತರವಿದೆ.'

'ಈ ಬಗ್ಗೆ ನೀನು ಮದುವೆಯ ವೇಳೆಯಲ್ಲಿ ನೋಡಬೇಕಿತ್ತು' ನಾನು ರೇಗುತ್ತಿದ್ದೆ.

ನೀನಾ ನನ್ನನ್ನು ಮುದ್ದಿಸುತ್ತಾ ಹೇಳಿದಳು, 'ಸ್ಕಾಟ್, ನೀವು ನಲ್ವತ್ತೆಂಟರ ವ್ಯಕ್ತಿಯಂತೆ ಎಲ್ಲಿ ಕಾಣಿಸ್ತೀರ? ಮೂವತ್ತೆಂಟರ ವ್ಯಕ್ತಿಯಂತೆ ಕಾಣಿಸ್ತೀರ... ನೀವು ಯಾವ ವಯಸ್ಸಿನವರಂತೆ ಕಾಣಿಸ್ತೀರೋ, ಅದೇ ವಯಸ್ಸು ಬಾಯಿಗೆ ಬರುತ್ತೆ.'

ನಾನು ನಿರುತ್ತರನಾಗುತ್ತಿದ್ದೆ.

ನಾನು ನನ್ನ ಸ್ಕಾಟಿಷ್ ಪಾರಂಪರಿಕ ಉಡುಪುಗಳಾದ ಗೆರೆ ಗೆರೆಯ ಸ್ಕರ್ಟ್ ಧರಿಸಿದಾಗ ಅವಳು ನನ್ನನ್ನು ಗೇಲಿ ಮಾಡುತ್ತಿದ್ದಳು. ನನ್ನ ನೋಡಿ ಮನಸಾರೆ ನಗುತ್ತಿದ್ದಳು. ಸ್ಕಾಟ್ಲೆಂಡಿನ ರಾಷ್ಟ್ರೀಯ ಉಡುಪನ್ನು ವಾಸ್ತವವಾಗಿ ಇಂದು ಹೆಚ್ಚು ಧರಿಸಲಾಗುತ್ತಿಲ್ಲ. ಆದರೆ ನನಗೆ ನನ್ನ ಪಾರಂಪರಿಕ ಸ್ಕಾಟಿಷ್ ಹೈಲ್ಯಾಂಡ್ ಉಡುಪಿನ ಬಗ್ಗೆ ಹೆಮ್ಮೆಯಿದೆ. ಸ್ಕಾಟಿಷ್‌ರ ಪುರುಷರ ಉಡುಪನ್ನು ಜಗತ್ತಿನ ಜನ ತಮ್ಮ ತಮ್ಮ ಭಾಷೆಯಲ್ಲಿ ಕಿಲ್ಟ್, ಸ್ಕರ್ಟ್ ಅಥವಾ ಲಂಗ ಎನ್ನುತ್ತಾರೆ. ಇದು ಜಗತ್ತಿನ ಅತ್ಯಂತ ವಿಶಿಷ್ಟ ಪಾರಂಪರಿಕ ಉಡುಪುಗಳಲ್ಲಿ ಒಂದಾಗಿದೆ. ನೃತ್ಯವನ್ನು ಪ್ರಸ್ತುತಪಡಿಸುವಾಗ ಈ ಉಡುಗೆ ನನಗೆ ಅನಿವಾರ್ಯವಾಗಿದೆ. ವಿಶೇಷ ಸಂದರ್ಭಗಳಲ್ಲೂ ಈ ಉಡುಪುಗಳನ್ನು ಧರಿಸುವುದು ನನಗೆ ಅನಿವಾರ್ಯವಾಗಿದೆ.

'ಎಲ್ಲರೆದುರು ನಿಮ್ಮ ಈ ಲಂಗ ಉಟ್ಟು ಕುಣಿಯಲಾರಂಭಿಸುತ್ತೀರ! ಹೆಣ್ಣಿನಂತೆ ಕಾಣಿಸ್ತೀರ' ಅವಳು ನನ್ನನ್ನು ನಿಂದಿಸುತ್ತಿದ್ದಳು.

ಒಮ್ಮೊಮ್ಮೆ ಕೋಪಿಷ್ಠಳಾಗಿ ಹೇಳುತ್ತಿದ್ದಳು, 'ಇದು ಹಳೆ ಕಾಲದ ಡ್ರೆಸ್.'

'ಹಳೆ ಕಾಲದ ಎಲ್ಲಾ ವಸ್ತುಗಳು ಕೆಡುಕಾಗಿರುವುದಿಲ್ಲ' ನಾನು ತರ್ಕಿಸುತ್ತಿದ್ದೆ.

ಮೊದಲ ಮಹಾಯುದ್ಧದ ವೇಳೆಯಲ್ಲಿ ಜರ್ಮನ್ನರು ಸ್ಕಾಟಿಷ್ ಸೈನಿಕರಿಗೆ 'ನರಕದ ದೇವಿಯರು' ಎಂದು ಹೆಸರು ಕೊಟ್ಟರು. ಏಕೆಂದರೆ ಸ್ಕಾಟಿಷ್ ಸೈನಿಕರು ಕಂದಕಗಳಿಂದ ಕಿಲ್ಟ್ ಧರಿಸಿ ಹೊರಬಂದಾಗ ಹೆಂಗಸರಂತೆ ಕಾಣಿಸುತ್ತಿದ್ದರು ಎಂದು ನೀನಾ ನನಗೆ ಹೇಳಿದ್ದಳು.

ನಂತರ ಅವಳು ನನಗೂ 'ನರಕದ ದೇವಿ' ಎಂದು ರೇಗಿಸುತ್ತಿದ್ದಳು.

ನರಕದ ದೇವಿ! ಹೂಂ...!

ಅವಳು ನನ್ನ ಬಗ್ಗೆ ಏನೇನೋ ಬೊಗಳುತ್ತಿದ್ದಳು, ನನ್ನೆದುರೇ ಬೊಗಳುತ್ತಿದ್ದಳು! ಅವಳ ಅನೇಕ ವಿಶೇಷಣಗಳು ನನಗೆ ಅರ್ಥವೇ ಆಗುತ್ತಿರಲಿಲ್ಲ. ಜನರೆದುರು ನನ್ನ ನಿಜವಾದ ವಯಸ್ಸನ್ನು ಮುಚ್ಚಿಡುತ್ತಿದ್ದಳು, ಆದರೆ ನನ್ನನ್ನು 'ಮುದಿಯ' ಎಂದು ರೇಗಿಸುತ್ತಿದ್ದಳು. ಅದೊಂದು ದಿನ ಅವಳೇ ಅದರ ಅರ್ಥವನ್ನೂ ನನಗೆ ತಿಳಿಯಪಡಿಸಿದಳು. 'ಮುದಿಯ ಅಂದರೆ ವಯಸ್ಸಿನಿಂದಾಗಿ ಹುಚ್ಚನಾಗ್ತಾನೆ.'

'ನಿನಗಿಂತ ಹತ್ತು ವರ್ಷ ಮೊದಲು ಹುಟ್ಟಿ ನಾನ್ಯಾವ ಅಪರಾಧವನ್ನು ಮಾಡಲಿಲ್ಲ.'

ನಾನು ಉದಾಸೀನತೆಯಿಂದ ಮುಗುಳ್ನಕ್ಕೆ. ವಿಧಿಯ ಆಟ. ನೀನಾ ನನಗಿಂತ ಹತ್ತು ವರ್ಷ ಚಿಕ್ಕವಳಾಗಿದ್ದಳು. ಆದರೆ ಇಂದು ನಾನು ಅವಳ ಸಮಾಧಿಗೆ ಹೂವು ಹಾಕುತ್ತಿದ್ದೇನೆ. ಜೀವನ ಅದೆಷ್ಟು ಅನಿರೀಕ್ಷಿತವಾಗುತ್ತದೆ! ಜೀವನ ಯಾರಿಗೆ ಏನು ಕೊಟ್ಟಿತು, ಎಂಥ ಪರೀಕ್ಷೆಯನ್ನು ತೆಗೆದುಕೊಂಡಿತು, ತಿಳಿಯದು.

ಮತ್ತೊಂದು ವಿಷಯ. ನೀವು ದೀರ್ಘ ಸಮಯದವರೆಗೆ ಒಂಟಿಯಾಗಿರುವಿರಾದರೆ, ನೀವು ಒಬ್ಬರನ್ನು ಪ್ರೀತಿಯಿಂದಾಗಿ ಆಯ್ಕೆ ಮಾಡುತ್ತಿದ್ದೀರೋ ಅಥವಾ ನಿಮ್ಮ ಒಂಟಿತನದಿಂದ ಬೇಸತ್ತದ್ದರಿಂದ ಆಯ್ಕೆ ಮಾಡುತ್ತಿದ್ದೀರೋ ಎಂಬುದನ್ನು ಅರ್ಥ ಮಾಡಿಕೊಳ್ಳಲಾರಿರಿ. ನೀನಾ ಒಂದು ಹುಚ್ಚುತನದಲ್ಲಿ ತೀರ್ಮಾನವನ್ನು ಕೈಗೊಂಡಿದ್ದಳು. ಅವಳು ತನ್ನ ಒಂಟಿತನದಿಂದಾಗಿ ಹೆದರಿದ್ದಳು. ಅವಳಿಗೊಬ್ಬ ಸಂಗಾತಿ ಬೇಕಾಗಿದ್ದ. ನಂತರ ನಾನವಳಿಗೆ ಹಿಡಿಸದಿದ್ದಾಗ ನನ್ನನ್ನು ತ್ಯಜಿಸಿದಳು ಎಂಬುದನ್ನು ನಾನು ಮನಗಂಡೆ. ಆದರೆ ಅವಳು ನನ್ನನ್ನು ತುಂಬಾ ಗಾಢವಾಗಿ ಪ್ರೀತಿಸಿದಳು ಎಂಬುದರಲ್ಲಿ ನನಗೆ ಯಾವುದೇ ಅನುಮಾನವಿಲ್ಲ. ಅದೆಷ್ಟೋ ಸಂಗತಿಗಳು ಅವಳ ಪ್ರೀತಿಯನ್ನು ವ್ಯಕ್ತಪಡಿಸುತ್ತವೆ.

ಅವಳು ಅಡುಗೆ ಮತ್ತು ತಿನಿಸುಗಳನ್ನು ಮಾಡಿದಾಗ ಮೊದಲು ನನಗೆ ಕೊಡುತ್ತಿದ್ದಳು. ಕೊಡುವುದಕ್ಕೆ ಮೊದಲು ರುಚಿ ಹೇಗಿದೆ ಎಂದು ಪರೀಕ್ಷಿಸುತ್ತಿದ್ದಳು. ಒಂದು ವೇಳೆ ರುಚಿ ಸರಿಯಿರದಿದ್ದರೆ, 'ತಿನ್ನಬೇಡಿ. ನಾನು ನಿಮಗೆ ಮತ್ತೆ ತಯಾರಿಸುತ್ತೇನೆ' ಎನ್ನುತ್ತಿದ್ದಳು. ನಾನು ನಗುತ್ತಿದ್ದೆ. ನನಗೆ ಅವಳ ಈ ಭಂಗಿ ತುಂಬಾ ಇಷ್ಟವಾಗುತ್ತಿತ್ತು.

ನಾವು ಪೇಟೆಗೆ ಹೋದಾಗ ಅವಳು ಮಹಿಳೆಯರ ಬಟ್ಟೆಯ ಅಂಗಡಿ ಎದುರು ನಿಲ್ಲದೆ, ಪುರುಷರ ಬಟ್ಟೆಯ ಅಂಗಡಿ ಎದುರು ನಿಲ್ಲುತ್ತಿದ್ದಳು.

'ನೀನೇಕೆ ಸದಾ ಮೇಲ್ ಕ್ಲಾಥ್ ಶಾಪ್ ಎದುರು ನಿಲ್ತೀಯ? ನಮ್ಮ ಮನೆಯಲ್ಲಿ ಹುಡುಗಿಯರೇ ಇದ್ದಾರೆ.'

'ಹುಡುಗಿಯರಿಗೆ ವಸ್ತುಗಳನ್ನು ಕೊಂಡು ಕೊಂಡು ಬೇಸರಗೊಂಡಿದ್ದೇನೆ. ಅದೆಷ್ಟೋ ದಿನಗಳ ನಂತರ ಪುರುಷನೊಬ್ಬ ಬಂದಿದ್ದಾನೆ' ಅವಳು ಪ್ರೀತಿಯಿಂದ ನನ್ನನ್ನು ನೋಡುತ್ತಿದ್ದಳು.

ನೀನಾ ಸ್ಟೈಲಿಷ್ ಹೆಣ್ಣಾಗಿದ್ದಳು. ಅವಳು ಆನ್‌ಲೈನ್ ಶಾಪಿಂಗ್‌ನಿಂದಲೂ ನನಗೆ ಜಾಕೆಟ್, ಶರ್ಟ್, ಪ್ಯಾಂಟ್, ಕಾರ್ಡಿಗನ್, ಸ್ವೆಟರ್, ಗಡಿಯಾರ, ವ್ಯಾಲೆಟ್ ಮುಂತಾದ ಉಡುಗೊರೆಗಳನ್ನು ಖರೀದಿಸುತ್ತಿದ್ದಳು. ಅವಳು ನನಗೆ ಖರೀದಿಸಿದಷ್ಟು, ನಾನು ಅವಳಿಗೆ ಖರೀದಿಸಲಿಲ್ಲ. ಒಮ್ಮೆ ನಾನು ನನ್ನ ಶಾಲೆಯ ಪರವಾಗಿ ಟರ್ಕಿಗೆ ಹೋಗಿದ್ದೆ. ಅಲ್ಲಿಂದ ಅವಳಿಗಾಗಿ ಹುಲಿ ಚರ್ಮದ ಮತ್ತು ಮೊಲದ ಚರ್ಮದ ಒಂದು ದುಬಾರಿ ಕೋಟ್ ತಂದಿದ್ದೆ. ಅವಳು ತುಂಬಾ ಸಂತಸದಿಂದ, 'ಸ್ಕಾಟ್ ನೀನು ಎಲ್ಲವನ್ನೂ ಒಮ್ಮೆಲೆ ತೀರಿಸಿಬಿಟ್ಟೆ' ಎಂದು ಆಶ್ಚರ್ಯದಿಂದ ಕೋಟನ್ನು ನೋಡುತ್ತಾ ಹೇಳಿದ್ದಳು. ಅವಳು ಆ ಕೋಟು ಹಳೆಯದಾಗುವವರೆಗೆ ಧರಿಸುತ್ತಿದ್ದಳು.

ಇದೆಲ್ಲವೂ ಪ್ರೀತಿಯೇ ಆಗಿತ್ತು. ತನ್ನ ಪ್ರೀತಿಯನ್ನು ಸಾಬೀತುಪಡಿಸಲು ನೀನಾ ತನ್ನ ಹೃದಯವನ್ನು ಸೀಳಿ ತೋರಿಸಬೇಕಿರಲಿಲ್ಲ. ನಾನು ಅವಳನ್ನು ಪ್ರೀತಿಸುತ್ತಿದ್ದೆನೆ? ಖಂಡಿತ ಪ್ರೀತಿಸುತ್ತಿದ್ದೆ! ಇಂದೂ ಪ್ರೀತಿಸುತ್ತೇನೆ. ನನ್ನ ಪ್ರೀತಿ ನಿಜವಾಗಿತ್ತು. ಅವಳಿಗಾಗಿಯೇ ನನ್ನ ದೇಶವನ್ನು ತ್ಯಜಿಸಿ, ನನ್ನ ಬಂಧುಬಾಂಧವರನ್ನು, ನನ್ನ ಪುತ್ರಿಯರಿಂದ ದೂರವಾಗಿ ಕೋಪನ್‌ಹೇಗನ್‌ಗೆ ಬಂದು ನೆಲೆಸಿದ್ದೆ. ನನಗೆ ನೀನಾಳೊಂದಿಗೆ ಉದಾತ್ತ ಪ್ರೀತಿ ಮತ್ತು ಗಾಢ ವಿಷಾದ ಎರಡೂ ಅನುಭವವಾದವು.